ಜಿಜ್ಞಾಸೆಗೊಳಗಾದ. ಇವತ್ತು ನಿವೇದನೆ ಮಾಡಿಕೊಂಡ ಮೇಲೆ ತಾನೂ ಅಂತ ಮಾತುಗಳನ್ನೆಲ್ಲ ಹೇಳಬೇಕು ಅನ್ನುವ ಹುಕ್ಕಿ ಬಂದು ಹಿತವೆನಿಸತೊಡಗಿತು. ರಿಚ್ಮಂಡ್ ರಸ್ತೆಯಲ್ಲಿದ್ದ ಎಮ್ಮೆನ್ಸಿ ಕಂಪೆನಿಗೆ ಆವತ್ತು ಹೋದವನಿಗೆ ಹ್ಯೂಮನ್ ರಿಸೋರ್ಸಸ್ ವಿಭಾಗದಲ್ಲಿ ಪರಿಚಯವಾದವಳು ಮಾತಾಡುತ್ತಾ ಹೇಳಿದ್ದಳು, 'ನಾನು ಬೀನಾ, ನಮ್ಮೂರು ಬಬೀನಾ'. ಮಧ್ಯಪ್ರದೇಶದಲ್ಲಿ ಬರುವ ಆ ಸ್ಟೇಷನ್ ಮೂಲಕ ಪಯಣಿಸಿದ ನೆನಪಾಗಿ, ಪ್ರಾಸಬದ್ಧ ಸಾಲು ಸಿನಿಮಾದ ಹಾಡೊಂದರಂತೆನಿಸಿ ಪ್ರಭಾವಿತನಾಗಿದ್ದ. ಮತ್ತೂ ಸ್ವಲ್ಪ ಹೊತ್ತು ಮಾತಾಡಬೇಕೆನಿಸಿತ್ತು. ಮತ್ತೆರಡು ಭೇಟಿಯಲ್ಲಿ ಸ್ನೇಹವಾಗಿತ್ತು. ಅವಳ ಅಜ್ಜ ರಾಮಚರಣ ತಿವಾರಿ ಬಬೀನಾದಿಂದ ಬಂದು ಬೆಂಗಳೂರಲ್ಲಿ ನೆಲೆಸಿ ಡ್ರೈಫ್ರುಟ್ಸ್ ಸಗಟು ವ್ಯಾಪಾರದಲ್ಲಿ ಯಶಸ್ಸು ಕಂಡುಕೊಂಡಿದ್ದರು. ಬೀನಾ ಎಂಜಿನಿಯರಿಂಗ್ ಮುಗಿಸಿ, ಎಚ್.ಆರ್. ಸ್ಪೆಷಲಿಸ್ಟಾಗಿ ಇಲ್ಲೆ ಒಳ್ಳೇ ಕೆಲಸ ಸಿಕ್ಕಿತ್ತು. ಎಂಥಾ ಚುರುಕು ಬುದ್ಧಿಯ ಹುಡುಗಿ! ಮಾದಕ ಕಣ್ಣುಗಳು. ಆದರೆ ಹುಚ್ಚು ಭಾವುಕತೆಯವಳಲ್ಲ. ಜೀವನದ ಬಗ್ಗೆ ವ್ಯವಹಾರಜ್ಞಾನವಿದ್ದಷ್ಟೇ ಆಶಾವಾದ ತುಂಬಿಕೊಂಡವಳ ಮಾತು ಎದುರಿನವರನ್ನು ಪ್ರಭಾವಿಸಿಬಿಡುತ್ತದೆ. 'ಸುಲಭಕ್ಕೆ ಯಾಮಾರಿಸಲು ಸಾಧ್ಯವಿಲ್ಲಮ್ಮ ನಿನ್ನನ್ನ; ಪ್ರಚಂಡೆ.' ಮನಸ್ಸಿನಲ್ಲಿ ಎಷ್ಟು ಬಾರಿ ಶ್ಲಾಘಿಸಿರಲಿಲ್ಲ ತಾನು? ಬಾಯಿಬಿಟ್ಟು ಯಾಕೆ ಹೇಳಲಿಲ್ಲವೋ ಅಷ್ಟೊಂದು ಸ್ನೇಹವಿರುವಾಗ? ಈಗ ಹೊಳೆಯಿತು; ಅವಳನ್ನು ಹೊಗಳುವುದಾದರೆ ಎಷ್ಟೊಂದು ಸಂಗತಿಗಳಿವೆ! ವೇಟರ್ ಮತ್ತೆ ಹತ್ತಿರ ಬಂದ.

'ವಾಲಂಟೈನ್ ಡೇಗೆ ನಾನು ಟೇಬಲ್ ರಿಸರ್ವ್ ಮಾಡಿರೋದು. ಅವರು ಬರೋವರೆಗೆ ಕಾಯಪ್ಪ. ಬೇಕಿದ್ರೆ ಜಾಸ್ತಿಕೊಡತೀನಿ' ಅಂದ ಸಣ್ಣ ಅಸಹನೆ ಬೆರೆಸಿ. ಸುತ್ತಮುತ್ತಲ ಟೇಬಲ್ಲುಗಳಾಗಲೆ ತುಂಬತೊಡಗಿದ್ದವು. ಗಂಟೆ ಹನ್ನೆರಡಾಗುತ್ತಿತ್ತು. ರಸ್ತೆಯಲ್ಲಿ ಕಣ್ಣು ಹರಿಸಿದ. ವಾಹನ ದಟ್ಟಣೆ ಜಾಸ್ತಿಯಾಗಿತ್ತು. ಯಾವುದೇ ಕಾರಿಂದ ಅಥವಾ ವೋಲ್ವೋ ಬಸ್ಸಿಂದ ಬೀನಾ ಇಳಿದುಬಿಡಬಹುದು ಅನಿಸಿ ಉದ್ವಿಗ್ನನಾದ. ಆ ಕ್ಷಣದ ನಿರ್ಧಾರ ತೆಗೆದುಕೊಳ್ಳುವಲ್ಲಿ ಅಥವಾ ಇಂಗ್ಲೀಷಿನಲ್ಲಿ ಇನಿಷಿಯೇಟಿವ್ಸ್ ಅಂತಾರಲ್ಲ ಅದರಲ್ಲಿ ತಾನು ಸ್ವಲ್ಪ ಹಿಂದೆ ಅನ್ನುವುದು ಆಗಾಗ ಅನುಭವಕ್ಕೆ ಬಂದಿದೆ. ಆದರೆ ಸುಧಾರಿಸಿಕೊಂಡಿಲ್ಲ. ಇದರ ಮೂಲ ತನ್ನ ಬಾಲ್ಯದಲ್ಲಿತ್ತೊ ಗೊತ್ತಿಲ್ಲ. ಚಿಕ್ಕ ವಯಸ್ಸಿನಲ್ಲಿ ಅಮ್ಮನ್ನ ಕಳಕೊಂಡಿದ್ದ. ಚಿಕ್ಕಮ್ಮ ಮನೆಗೆ ಬಂದರೂ ಅಜ್ಜಿಯೆ ತನಗೆ ಸ್ನಾನ ಮಾಡಿಸುವುದು, ಬಟ್ಟೆ ತೊಡಿಸುವುದು, ಊಟ ಮಾಡಿಸುವುದು ಎಲ್ಲಾ ಆಗಿತ್ತು. ಚಿಕ್ಕಮ್ಮನಿಗೆ ಎರಡು ಹೆಣ್ಣೇ ಸಾಲಾಗಿ ಹುಟ್ಟಿ ತನ್ನ ಹೊಟ್ಟೆಯಲ್ಲೆ ಹುಟ್ಟಿದ ಒಂದು ಗಂಡಿರಬೇಕು ಅಂತ ಹಟಕ್ಕೆ ಬಿದ್ದು ಮತ್ತೆರಡು ಹಡೆದು ಗಂಡಾಗುವವರೆಗೂ ಬಿಟ್ಟಿರಲಿಲ್ಲ. ಇದು ಅಜ್ಜಿಗೆ ಸೊಸೆಯ ಮೇಲೆ ಸಿಟ್ಟು ಬಂದಾಗಿನ ಒಂದು ಜಗಳದಲ್ಲಿ ಗೊತ್ತಾಗಿತ್ತು. ತಾನು ಚಿಕ್ಕಮ್ಮನಿಗೆ ಮಗನೂ ಅಲ್ಲ; ಅವರೆಲ್ಲರ ಬಗ್ಗೆ ತನಗಾವ ಹೊಣೆಯೂ ಇಲ್ಲ ಎಂಬ ಅನಾದರವನ್ನು ಅವತ್ತೆ ತುಂಬುಕೊಂಡುಬಿಟ್ಟ. ಚಿಕ್ಕಮ್ಮ ಮತ್ತವರ ಮಕ್ಕಳು ಹೋಗಲಿ, ಅಪ್ಪ ಹೇಳಿದ್ದು ಸಹ ತನಗೆ ಕೇಳಿಸಲೇ ಇಲ್ಲ ಅನ್ನುವಂತೆ ನಟಿಸಲು ಸುರು ಮಾಡಿದ. ಪಾಲಿಸುವುದು ಅನಿವಾರ್ಯವಾದಲ್ಲಿ ಹಟಪೂರ್ವಕ ತಡ ಮಾಡುವುದನ್ನು ಸ್ವಭಾವ ಮಾಡಿಕೊಂಡ. ಕಾಫೀಡೇಯಲ್ಲಿ ಕುಳಿತು ಹರಟುವಾಗೊಮ್ಮೆ ಬೀನಾಳಿಗೆ ಇದನ್ನು ಹೇಳಿದ್ದ. ಅವಳು 'ಏ... ಧನಂಜಯ್, ಬಿಡೋ ಅತ್ಲಾಗೆ. ಇಂತದ್ದೇ ಗಿಡಿದು ಗಿಡಿದು ತುಂಬಿಕೊಳ್ತಿದ್ದರೆ ಮನಸಲ್ಲಿ ಖಾಲಿ ಜಾಗವೇ ಇರೋದಿಲ್ಲ. ಬರೋದನ್ನ ಉಪಯುಕ್ತವಾದ್ದನ್ನ ಆಮೇಲೆ ಎಲ್ಲಿ ಇಟ್ಕೊಳ್ತೀಯ? ನಿನ್ನಪ್ಪನಿಗೆ ಚಿಕ್ಕ ಪ್ರಾಯದಲ್ಲಿ ಹೆಂಡತಿಯಿಲ್ಲದ ಹಾಗಾಯ್ತು.